ಶ್ರೀ ಎಸ್. ಬಾಚೀ ರೆಡ್ಡಿ :—ನಮ್ಮ ತಾಲ್ಲೂಕಿನಲ್ಲಿ 2,509 ಎಕರೆ ಸಾಗುವಳಿ ಜಮೀನು ಇದೆ. ಅದು ಗೋಮಾಳವಾಗಿರುವುದರಿಂದ ಸಾಗುವಳಿಗೆ ಅವಕಾಶ ಇಲ್ಲದಂತಾಗಿದೆ. ಇನ್ನು ಕೆಲವು ಸಾಗುವಳಿಗೆ ಲಾಯಕ್ಕಾಗುವಂಥ ಜಮೀನು ಇದೆ. ಅಂಥಾದ್ದು ಯಾವುದು ಎಂದರೆ ಖರಾಬು ತೋಪು ಈಚಲುವನ ಇದೆ. ಇದು ಜಮೀನು ಲೆಕ್ಕದಲ್ಲಿ ಇರುತ್ತದೆಯೇ ವಿನಾ ಅದನ್ನು ಯಾವ ರೀತಿಯಾಗಿಯೂ ಮುಂದುವರೆಸಿಲ್ಲ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲಿಸಿ ಯೋಗ್ಯವಾದಂಥ ಜಮೀನುಗಳನ್ನು ಸಾಗುವಳಿ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ನಾನಾ ಭಾಗಗಳಲ್ಲಿ ಬಂದಂಥ ವರದಿ ಪ್ರಕಾರ ಅಕ್ರಮ ಸ್ವಾಧೀನವಾಗಿರುವುದು ಒಂದು ಕಡೆ ಇದೆ. ಅದನ್ನು ಖುಲ್ಲಾ ಮಾಡಿಸುತ್ತಾರೆ. ಆದಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರನ್ನು ಗೊತ್ತು ಮಾಡಿದ್ದೇವೆ. ಇನ್ನು ಕೆಲವು ಕಡೆ ಕೆರೆಗಳ ಅಂಗಳ, ಈಚಲುವನ, ಗುಂಡು ತೋಪು ಅಕ್ರಮ ಸ್ವಾಧೀನ ಮಾಡಿರುವುದೂ ಇದೆ. ಆದೂ ಅಲ್ಲದೆ ಅಲ್ಪ ಸ್ವಲ್ಪ ಫಾರೆಸ್ಟ್‌ನಲ್ಲೂ ಇದೆ. ಈ ತರಹ ಅಕ್ರಮ ಸ್ವಾಧೀನವನ್ನು ಮಾಡುವುದನ್ನು ತಡೆಗಟ್ಟಲು ಅದರಲ್ಲೂ ವ್ಯವಸಾಯಕ್ಕೆ ಲಾಯಕ್ಕಾಗಿ ಇರುವ ಜಮೀನುಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಹಲಗೇ ಗೌಡ :—ಈ ಅಕ್ರಮವಾದ ಜಮೀನುಗಳಲ್ಲಿ ಏನು ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಹೊರಗಟ್ಟಬೇಕು. ಈ ಬಗ್ಗೆ ತಾಸೀಲ್ದಾರರನ್ನು ಕೇಳಿದರೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಡೆಪ್ಯೂಟಿ ಕಮಿಷನರನ್ನು ಕೇಳಿದರೆ ಅವರೂ ಕೂಡ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಪಂಚಾಯ್ತಿಯವರನ್ನು ಕೇಳಿದರೆ ಅವರೂ ಕೂಡ ಅದೇ ರೀತಿ ಹೇಳುತ್ತಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈ ಅಕ್ರಮ ಸ್ವಾಧೀನ ಮಾಡಿದಂಥ ಜಮೀನುಗಳನ್ನು ತೀರ್ಮಾನಿಸುವ ಬಗ್ಗೆ ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಫಾರ್ ದರಖಾಸ್ತ್ ಎಂದು ಒಬ್ಬರನ್ನು ನೇಮಕ ಮಾಡಿದ್ದೇವೆ. ಅವರಿಗೆ ಈ ಬಗ್ಗೆ ಅಧಿಕಾರ ಕೊಟ್ಟಿದ್ದೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಮಾನ್ಯ ಮಂತ್ರಿಗಳು ಇದಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಿಸಿದ್ದೇವೆ ಎಂದು ಹೇಳಿದರು. ಈಗ ಅಕ್ರಮ ಸಾಗುವಳಿಯಲ್ಲಿರ ತಕ್ಕಂಥ 625 ಎಕರೆ ಜಮೀನುಗಳು ಏನು ಇವೆ, ಅದರಲ್ಲಿ ಎಷ್ಟು ಎಕರೆ ಜಮೀನುಗಳನ್ನು ಬಿಡಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈಗ 230 ಅರ್ಜಿಗಳು ಬಂದಿವೆ. ಅದರಲ್ಲಿ 45 ಎಕರೆ ಕನ್‌ಫರ್ಮ್ ಆಗಿದೆ. ಇನ್ನು ಉಳಿದಿದ್ದು ವಿಚಾರಣೆ ನಡೆಯುತ್ತಾ ಇದೆ.

REPAIRS TO HOSPITAL BUILDING AT LAKSHMIPURA

884. Sri S. BACHI REDDY (Srinivasapura).—

Will the Minister for Health be pleased to state :—

(*a*) whether annual repairs of the Hospital Building at Lakshmipura in Srinivasapur Taluk is being carried out ;

(*b*) if not, the reason for the same ?

Sri H. SIDDAVEERAPPA (Minister for Health).—

(*a*) No.

(*b*) After the formation of a new P.W.D. Sub-Division at Srinivasapur, the Lakshmipura L.F. Dispensary Building was left over in the list to be maintained by annual repairs under Srinivasapur Sub-Division. It has been included for annual repairs during 1973-74.

ಶ್ರೀ ಎಸ್. ಬಾಜೀ ರೆಡ್ಡಿ:—ಸ್ವಾಮಿ, ಶ್ರೀನಿವಾಸಪುರ ತಾಲ್ಲೂಕು ಲಕ್ಷ್ಮೀಪುರದ ಆಸ್ಪತ್ರೆಯನ್ನು 20 ವರ್ಷದ ಕೆಳಗೆ ಒಬ್ಬ ದಾನಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿಸಿದನು. ಈ ಕಟ್ಟಡ 10-12 ವರ್ಷಗಳಿಂದಲೂ ಸ್ವಚ್ಛತೆ ಇಲ್ಲದೆ ದುರಸ್ತಿಯಾಗಿಲ್ಲ. ಇದನ್ನು ದುರಸ್ತಿ ಮಾಡದೇ ಇರುವುದರಿಂದ ಆ ದಾನಿಯ ಮನಸ್ಸು ಎಷ್ಟು ನೊಂದಿರಬಹುದು ಎನ್ನುವುದನ್ನು ಸರ್ಕಾರದವರು ಗಮನಿಸಬೇಕು. ಆದುದರಿಂದ ಆ ಕಟ್ಟಡದ ರಿಪೇರಿ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ :—ಈ ಬಗ್ಗೆ ನಾನು ಉತ್ತರದಲ್ಲೇ ಹೇಳಿದ್ದೇನೆ. 1973—74 ರಲ್ಲಿ ವಾರ್ಷಿಕವಾಗಿ ಕೈಕೊಳ್ಳಬೇಕಾಗಿರುವ ದುರಸ್ತಿ ಕಾಮಗಾರಿಗಳಲ್ಲಿ ಇದನ್ನು ಸೇರಿಸಲಾಗಿದೆ ಎಂದು ಹೇಳಿದ್ದೇನೆ. ಆ ಪ್ರಕಾರ ಅವರು ಮಾಡಿಸುತ್ತಾರೆ.

Short Notice Question and Answer

BONUS TO WORKERS OF BANDIGUDDA MINES

40. Sri S. M. SHEERANALY CHANDRASEKHAR, (Hosanagar).—

Will the Minister for Industries be pleased to state :—

(*a*) whether the Government is aware that $8\frac{1}{4}$ per cent bonus is not paid to the workers of the Bandigudda Mines even though there is provision in Central Bonus Act ;

(*b*) if so, the action Government propose to take in the matter ?

Sri S. M. KRISHNA (Minister for Industries).—

(*a*) The workers of Mysore Iron and Steel Ltd., working in Bandigudda Mines had been paid bonus at 8.33 per cent of the total salary/wages earned by them for the year 1971-72 as per the provisions of Payment of Bonus Act.

(*b*) Does not arise.